ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1028 (1140)
ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	07.03.2022
ಉತ್ತರಿಸುವವರು	:	ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮೀಸಲು ಅರಣ್ಯ ಪ್ರದೇಶದಿಂದ 10 ಕಿ.ಮೀ ವ್ಯಾಪ್ತಿಯ ಒಳಗೆ ಸಾಮಿಲ್ಲುಗಳು ಇರಬೇಕೆಂಬ ನಿಯಮವಿದ್ದರೂ 13 ಕಿ.ಮೀ ವ್ಯಾಪ್ತಿಯಷ್ಟು ದೂರದಲ್ಲಿರುವ ಕೃಷ್ಣಾಪುರ ಗ್ರಾಮದಲ್ಲಿ ಸಾಮಿಲ್ಲುಗಳಿಗೆ ಯಾವ ನಿಯಮದ ಅನ್ವಯ ಅನುಮತಿ ನೀಡಲಾಗಿದೆ; (ವಿವರ ನೀಡುವುದು)	ಕರ್ನಾಟಕ ಅರಣ್ಯ ನಿಯಮಾವಳಿ 1969ರ ನಿಯಮ 163ರನ್ವಯ, ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮಗಳಲ್ಲಿ ಈ ಕೆಳಗಿನ ನಾಲ್ಕು ಮರದ ಮಿಲ್ಲುಗಳಿಗೆ ಅನುಮತಿ ನೀಡಲಾಗಿದೆ. 1. ಮ|| ಕಾಳಿಕಾಂಬ ಫರ್ನಿಚರ್ಸ್, ಕೃಷ್ಣಾಪುರ ಕಾಟಿಪಳ್ಳ, ಇದು1989-90ರಲ್ಲಿ ಸ್ಥಾಪನೆಗೊಂಡಿರುತ್ತದೆ. 2. ಮ||ಆಶಾ ವುಡ್ವರ್ಕ್ಸ್ ಇಂಡಸ್ಟ್ರೀಸ್, ಕೃಷ್ಣಾಪುರ, ಕಾಟಿಪಳ್ಳ ಇದು 1985-86ರಲ್ಲಿ ಸ್ಥಾಪನೆಗೊಂಡಿರುತ್ತದೆ. 3. ಮ||ಕಾಳಿಕಾಂ 4. ಬ ವುಡ್ ಇಂಡಸ್ಟ್ರೀಸ್ & ಫರ್ನಿಚರ್ಸ್, 5ನೇ ಬ್ಲಾಕ್, ಕೃಷ್ಣಾಪುರ, ಕಾಟಿಪಳ್ಳ ಇದು 2002-03ರಲ್ಲಿ ಸ್ಥಾಪನೆಗೊಂಡಿರುತ್ತದೆ. 5. ಮ||ಎಸ್ಕಿ ಟಿಂಬರ್ಸ್ & ವುಡ್ ಇಂಡಸ್ಟ್ರೀಸ್, ಕಾಟಿಪಳ್ಳಿ 2000-01ರಲ್ಲಿ ಸ್ಥಾಪನೆಗೊಂಡಿರುತ್ತದೆ.
ಆ)	1975-1980ರ ದಶಕದಲ್ಲೇ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮಗಳು ನವಮಂಗಳೂರು ಬಂದರಿನ ವಸತಿ ರಹಿತರಿಗೆ ವಸತಿ ವ್ಯವಸ್ಥೆ ಕಲ್ಪಿಸಲು ಸ್ಥಳವನ್ನು ನಿಗದಿಪಡಿಸಿದ್ದರೂ ಈ ಪ್ರದೇಶದಲ್ಲಿ ಸಾಮಿಲ್ಲುಗಳನ್ನು ಸ್ಥಾಪಿಸಲು ಯಾವ ನಿಯಮದ ಅನ್ವಯ ಅನುಮತಿ ನೀಡಲಾಗಿದೆ;	1975-1980ರ ದಶಕದಲ್ಲೇ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮಗಳಲ್ಲಿ ಕರ್ನಾಟಕ ಅರಣ್ಯ ನಿಯಮಾವಳಿ 1969ರ ನಿಯಮ 163ರನ್ವಯ ಸಾಮಿಲ್ಲುಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗಿರುತ್ತದೆ.
ಇ)	ಈ ಪ್ರದೇಶದಲ್ಲಿ ಸಾಮಿಲ್ಲುಗಳನ್ನು ಸ್ಥಾಪಿಸಲು ನಿಯಮಬಾಹಿರವಾಗಿ ಅನುಮತಿ ನೀಡಿದ ಮತ್ತು ವರ್ಷಂಪ್ರತಿ ಅನುಮತಿಯನ್ನು ನವೀಕರಿಸುತ್ತಿರುವ ಯಾವ ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ; ಈ ಕುರಿತು ಸರಕಾರದ ನಿಲುವೇನು?	ಕರ್ನಾಟಕ ಅರಣ್ಯ ನಿಯಮಾವಳಿ 1969ರ ನಿಯಮ 163ರನ್ವಯ ಸಾಮಿಲ್ಲುಗಳನ್ನು ಸ್ಥಾಪಿಸಲು ಅನುಮತಿ ನೀಡಿರುವುದರಿಂದ, ನಿಯಮ ಬಾಹಿರವಾಗಿ ಯಾವುದೇ ಸಾಮಿಲ್ಲುಗಳನ್ನು ಸ್ಥಾಪಿಸಲು ಅನುಮತಿ ನೀಡಿರುವುದಿಲ್ಲ.

ಸಂಖ್ಯೆ: ಅಪಜೀ 09 ಎಫ್‌ಡಿಪಿ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು